

# ಎನ್‌ಐಟಿಕೆಯಲ್ಲಿ ಪರಿಸರ ಸ್ನೇಹಿ ಒಲಿಂಪಿಕ್ ಗಾತ್ರದ ಈಜುಕೊಳ

**ಸಂ.ಕ.ಸಮಾಚಾರ, ಮಂಗಳೂರು**

ಸುರತ್ಕಲ್‌ನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ತನ್ನ ಹೊಸ ಅತ್ಯಾಧುನಿಕ ಈಜುಕೊಳ ಲೋಕಾರ್ಪಣೆಗೊಂಡಿದೆ.

ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಮತ್ತು ಭಾರತೀಯ ರಾಷ್ಟ್ರೀಯ ಅಥ್ಲೆಟಿಕ್ಸ್ ತಂಡದ ಮುಖ್ಯ ತರಬೇತುದಾರ ಪಿ. ರಾಧಾಕೃಷ್ಣನ್ ನಾಯರ್ ಮುಖ್ಯ ಅತಿಥಿಯಾಗಿದ್ದರು. ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ, ಎನ್‌ಐಟಿಕೆ ರಿಜಿಸ್ಟ್ರಾರ್ ಕೆ.ರವೀಂದ್ರನಾಥ್, ಡೀನ್‌ಪ್ರೊ.ಎ.ಸಿ, ಹೆಗ್ಡೆ, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಈ ಕೊಳವು ಎನ್‌ಐಟಿಕೆಯ ಕ್ರೀಡಾ ಮೂಲಸೌಕರ್ಯವನ್ನು ಹೆಚ್ಚಿಸುತ್ತದೆ, ದೈಹಿಕ ಸಾಮರ್ಥ್ಯ ಮತ್ತು ಜಲ ಕ್ರೀಡೆಗಳನ್ನು ಉತ್ತೇಜಿಸುತ್ತದೆ. ಒಲಿಂಪಿಕ್ ಗಾತ್ರದ ಕೊಳ (50 ಮೀ.X 25 ಮೀ) 10 ಪಥಗಳು ಮತ್ತು ಪರಿಸರ ಸ್ನೇಹಿ, ರಾಸಾಯನಿಕ ಮುಕ್ತ ನೀರಿನ ಸಂಸ್ಕರಣೆಗಾಗಿ ಸುಧಾರಿತ ಓಝೋನ್ ಆಧಾರಿತ ಶೋಧನಾ ವ್ಯವಸ್ಥೆಯನ್ನು ಒಳಗೊಂಡಿದೆ.

ಎನ್‌ಐಟಿಕೆ 2024–25ರ ಅಖಿಲ ಭಾರತ ಅಂತರ ಎನ್‌ಐಟಿ ಕ್ರೀಡಾ ಕೂಟವನ್ನು 2025ರ ಜನವರಿ 10ರಿಂದ 12ರವರೆಗೆ ಆಯೋಜಿಸಲಿದೆ, ಇದರಲ್ಲಿ ಈಜು, ಅಥ್ಲೆಟಿಕ್ಸ್ ಮತ್ತು ಪವರ್ ಸ್ಪೋರ್ಟ್ಸ್ ಸೇರಿವೆ. ಈ ಕೊಳವು ವಿವಿಧ ಈಜು ಸ್ಪರ್ಧೆಗಳು, ತರಬೇತಿ ಶಿಬಿರಗಳು ಮತ್ತು ಫಿಟ್ನೆಸ್ ಕಾರ್ಯಕ್ರಮಗಳನ್ನು ಸಹ ಬೆಂಬಲಿಸುತ್ತದೆ.

ಈ ಯೋಜನೆಯು ಜುಲೈ 2023ರಲ್ಲಿ 7.39 ಕೋಟಿ ವೆಚ್ಚದಲ್ಲಿ ಪ್ರಾರಂಭವಾಯಿತು. 2024ರ ಸಂಸತ್ ಚುನಾವಣೆ ಮತ್ತು ಪ್ರತಿಕೂಲ ಹವಾಮಾನದಿಂದಾಗಿ ವಿಳಂಬದ ಹೊರತಾಗಿಯೂ, ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಕೋವಿಡ್–19 ಸಮಯದಲ್ಲಿ ನಿರ್ವಹಣೆಗೆ ಒಳಗಾದ ಈ ಸೌಲಭ್ಯವು ಈಗ ಬಳಕೆಗೆ ಸಿದ್ಧವಾಗಿದೆ.

Samyuktha karnataka, Date:22/11/24, p, 03